
# ಜನವರಿ 2024

# ಸೇವಾ ವಾಣಿ

## ಸೇವಾ ಸಂಗಮ

## ಆರ್ಬಿಟ್








**ಪೂಜ್ಯ ರಾಬರ್ಟ್ ಮಿರಾಂದಾ**
**ಗುಲ್ಬರ್ಗ ಧರ್ಮಾಧ್ಯಕ್ಷರು**

**ಫಾ. ವಿಕ್ಟರ್ ವಾಸ್**
**ನಿರ್ದೇಶಕರು**

## “ಅಂಗವೈಕಲ್ಯವು ಯಶಸ್ಸಿಗೆ ಅಡ್ಡಿಯಾಗುವುದಿಲ್ಲ”

ದಿನಾಂಕ 16.12.2023 ರಂದು ಆರ್ಬಿಟ್ ಸಂಸ್ಥೆಯಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಅಡಿಯಲ್ಲಿ “ವಿಶ್ವ ವಿಕಲ ಚೇತನರ ದಿನಾಚಾರಣೆ” ಹಮ್ಮಿಕೊಳ್ಳಲಾಯಿತು. ಶ್ರೀ ಜಗನಾಥ್. ಅಂಗವಿಕಲರ ಪೂನರ್ವಸತಿ ಕಾರ್ಯಕರ್ತರು (ಎಮ್.ಆರ್.ಡಬ್ಲ್ಯೂ) ಹುಮನಾಬಾದ ರವರು ಮಾತನಾಡಿ “ವಿಕಲಚೇತನರು ಯಾವುದರಲ್ಲಿಯು ಕಡಿಮೆ ಇಲ್ಲ. ಅವರು ಕೂಡ ಮನುಷ್ಯರು ಅವರಿಗು ಕೂಡ ಭಾವನೆಗಳಿವೆ, ಜಗತ್ತಿನ ಆಗು– ಹೋಗುಗಳಿಗೆ ಸ್ಪಂದಿಸುವ ಭೌತಿಕ ಸಾಮರ್ಥ್ಯವಿದೆ ಮತ್ತು ಅವರನ್ನು ಕೀಳಾಗಿ ನೋಡಬಾರದು. ಸರ್ಕಾರದಿಂದ ಸಿಗುವಂತ ಸೌಲಭ್ಯಗಳಾದ ಯು.ಡಿ.ಐ.ಡಿ ಕಾರ್ಡ್, ನಿರಾಮಯ ಕಾರ್ಡ್ ಮುಂತಾದವುಗಳ ಲಬಿಸುವಂತೆ ಮಾಡಬೇಕು ಎಂದು ತೀಳಿಸಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು ಮಾತನಾಡುತ್ತಾ, ಆರ್ಬಿಟ್ ಸಂಸ್ಥೆಯಿಂದ ಮಕ್ಕಳಿಗೆ ಸಹಾಯವಾಗುವಂತ ಸ್ಟ್ಯಾಂಡಿಗ್ ಪ್ರೇಮ್, ಎ.ಎಫ್.ಓ ಮುಂತಾದ ಸಾಧನೆ ಸಲಕರಣೆಗಳನ್ನು ಮಕ್ಕಳಿಗೆ ನೀಡಿದೆವೆ. ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಕಾರ್ಯಕರ್ತರು ವಿಶೇಷ ಚೇತನ ಮಕ್ಕಳ ಮನೆ ಭೇಟಿ ನೀಡಿ ಅವರಲ್ಲಿರುವ ನ್ಯೂನತೆಯನ್ನು ಕಂಡು ಹಿಡಿದು ಮಕ್ಕಳಿಗೆ ಚಟುವಟಿಕೆ ಮಾಡಿಸುವುದರ ಮೂಲಕ ಬದಲಾವಣೆ ತರುವುದ್ದಕ್ಕೆ ಪ್ರಯತ್ನಿಸುತ್ತಿದ್ದಾರೆ ಆದ್ದರಿಂದ  ಕಾರ್ಯಕರ್ತರ ಜೋತೆಗೆ ಪೋಷಕರು ಸಹಾಯಮಾಡುವುದಕ್ಕೆ ಮುಂದಾಗಬೇಕು ಎಂದು ತಿಳಿಸಿದರು.






Organization of Bidar Integral Transformation, ORBIT, NH 65, Near Railway Sation, Humnabad 585330
Web: www.orbitbidar.org E.mail: orbitbidar93@gmail.com Facebook:orbitbidar

# ನವಜೀವನ (ಎ.ಪಿ.ಎಫ್) ಕಾರ್ಯಕ್ರಮ

## "ವಿಶೇಷ ವಿಕಲ ಚೇತನರ ಸಭೆ"



ದಿನಾಂಕ 05.12.2023 ರಂದು ಹುಮ್ನಾಬಾದ್ ತಾಲೂಕಿನ ಬೋರಂಪಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಹಾದೇವಿ ರವರು ನಂದಿನಿ ವಿಶೇಷ ವಿಕಲ ಚೇತನರ ಸಭೆ ಮಾಡಿ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು ಕೆಲವರಿಗೆ ಯು.ಡಿ.ಐ.ಡಿ ಕಾರ್ಡ್ ಮಾಡಿಸಿಕೊಳ್ಳಲು ತಿಳಿಸಲಾಯಿತು ಮತ್ತು ಕೆಲವು ವಿಶೇಷ ಚೇತನ ವ್ಯಕ್ತಿಗಳ ಪಿಂಚಣಿ ಸಲುವಾಗಿ ಅರ್ಜಿ ಸಲ್ಲಿಸಲಾಯಿತು. ಈ ಸಭೆಯಲ್ಲಿ ಮಾನಸಿಕ ಅಸ್ವಸ್ಥರು ಮತ್ತು ವಿಶೇಷ ವಿಕಲ ಚೇತನರು ಸೇರಿ ಒಟ್ಟು 10 ಜನರು ಭಾಗವಹಿಸಿದರು.



ಡಿಸೆಂಬರ್ 13 2023 ರಂದು ಹುಮ್ನಾಬಾದ್ ತಾಲೂಕಿನ ನಿಂಬೂರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೀಲಕಂಠ ರವರು ಡಾ.ಬಿ.ಆರ್. ಅಂಬೇಡ್ಕರ್ ವಿಶೇಷ ವಿಕಲ ಚೇತನರ ಸಂಘ ರಚನೆ ಮಾಡಿದರು, ಸರ್ಕಾರಿ ಸೌಲಭ್ಯಗಳ ಕುರಿತು ಹಾಗೂ ಸರಕಾರಿ ಆಸ್ಪತ್ರೆಯಲ್ಲಿ ಸಿಗುವ ಔಷಧಿಗಳ ಬಗ್ಗೆ ಮಾಹಿತಿ ನೀಡಿ ತಪ್ಪದೆ ಔಷದ ಪಡೆಯುವಂತೆ ತಿಳಿಸಿದರು.

## ಮಾನಸಿಕ ಅಸ್ವಸ್ಥರ ಕುರಿತು ಅರಿವಿನ ಕಾರ್ಯಕ್ರಮ

ದಿನಾಂಕ 02.12.2023 ರಂದು ಹುಮ್ನಾಬಾದ್ ತಾಲೂಕಿನ ಕಬಿರಾಬಾದ ವಾಡಿ ಗ್ರಾಮದ ಮಹಿಳಾ ಸ್ವ-ಸಹಾಯ ಸಂಘದ 24 ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪ್ರೀತಿ ರವರು ಮಾನಸಿಕ ಅಸ್ವಸ್ಥರ ಕುರಿತು ಅರಿವಿನ ಕಾರ್ಯಕ್ರಮವನ್ನು ನಡೆಸಿದರು. ಮಾನಸಿಕ ಅಸ್ವಸ್ಥರ ಕಾಯಿಲೆಯ ಲಕ್ಷಣಗಳನ್ನು ವಿವರಿಸುತ್ತಾ ಮಾನಸಿಕ ಕಾಯಿಲೆಯನ್ನು ಹೇಗೆ ಕಂಡುಹಿಡಿಯಬಹುದು ಅದನ್ನು ಹೇಗೆ ಬಗೆಹರಿಸಕೊಳ್ಳಬಹುದುಬೆಂದು ಸಂಕ್ಷಿಪ್ತವಾಗಿ ತಿಳಿಸಿದರು.



## ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ



08ಡಿಸೆಂಬರ್ 2023 ರಂದು ಹುಮ್ನಾಬಾದ್ ತಾಲೂಕಿನ ದುಬಲಗುಂಡಿ ಗ್ರಾಮದ ಬಸವತಿರ್ಥ ವಿದ್ಯಾಪೀಠ ಪ್ರೌಢ ಶಾಲೆಯ 137 ವಿದ್ಯಾರ್ಥಿಗಳಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ರವರು ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಿದರು. ಮಾನಸಿಕ ರೋಗ ಎಂದರೇನು? ಮನಸಿಕ ಕಾಯಿಲೆಯ ಲಕ್ಷಣಗಳು ಹಾಗೂ ಮನಸಿಕ ಅಸ್ವಸ್ಥರನನು ಹೇಗೆ ಪೂನರ್ವಸತಿಗೆ ತರಬಹುದುಎಂದು ಸ್ಪಷ್ಟವಾಗಿ ತಿಳಿಸಿದರು.





18 ಡಿಸೆಂಬರ್ 2023 ರಂದು ಚಿಟಗುಲಪ್ಪಾ ತಾಲೂಕಿನ ಕಂದಗೂಳ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣಕುಮಾರ ರವರು ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಿದರು. ಮನಸಿಕ ಕಾಯಿಲೆ ಬಂದರೆ ಭಯಪಡುವ ಅವಶ್ಯಕತೆ ಇಲ್ಲಾ ಮತ್ತು ಮೂಡನಂಬಿಕೆಗೆ ಬಲಿಯಾಗದೆ ಸೂಕ್ತ ಸಮಯದಲ್ಲಿ ಕಾಯಿಲೆಯನ್ನು ಗುರುತಿಸಿ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆಯನ್ನು ಪಡೆಯಬೇಕೆಂದು ಮಾಹಿತಿ ನೀಡಿದರು ಈ ಕಾರ್ಯಕ್ರಮದಲ್ಲಿ ಒಟ್ಟು 25 ಮಹಿಳೆಯರು ಭಾಗವಹಿಸಿದರು.

## "ಮಾನಸಿಕ ಅಸ್ವಸ್ಥರಿಗೆ ಆಪ್ತ ಸಮಾಲೋಚನೆ"



19 ಡಿಸೆಂಬರ್ 2023 ರಂದು ಹುಮ್ನಾಬಾದ್ ತಾಲೂಕಿನ ಸಕ್ಕರ್‌ಗಂಜ್ ವಾಡಿ ಮತ್ತು ಅಮೀರಬಾದ ವಾಡಿ ಗ್ರಾಮದಲ್ಲಿ ನವಜೀವನ ಕಾರ್ಯಕ್ರಮದ ಸಹ ಆಪ್ತ ಸಮಾಲೋಚಕರಾದ ಶ್ರೀ ರವಿ ಜಿ ಅವರು ಮಾನಸಿಕ ಅಸ್ವಸ್ಥತೆ ಹೊಂದಿರುವ ಫಲಾನುಭವಿಗೆ ಆಪ್ತ ಸಮಾಲೋಚನೆ ಮಾಡಿದರು.ಮಾನಸಿಕ ಆರೋಗ್ಯದ ಕುರಿತು ಮಾಹಿತಿ ನೀಡಿ, ಸೂಕ್ತ ಸಮಯದಲ್ಲಿ ಚಿಕಿತ್ಸೆಗೆ ಒಳಪಡಿಸಲಾಯಿತು.ಖಿನ್ನತೆ ಅನ್ನುದು ಒಂದು ಕಾಯಿಲೆಯಾಗಿದೆ ಭಯಬಿಳುವ ಅವಶ್ಯಕತೆ ಇಲ್ಲ. ಸರ್ಕಾರಿ ಆಸ್ಪತ್ರೆಗೆ ಭೇಟಿನೀಡಿ ಮಾತ್ರೆಗಳನ್ನು ತೆಗೆದುಕೊಂಡು ಸೇವಿಸಬೇಕು ಎಂದು ಮಾನಸಿಕ ಅಸ್ವಸ್ಥರ ಪೋಷಕರಿಗೆ ಆತ್ಮವಿಶ್ವಷ ನೀಡಿಲಾಯಿತು.

# ಮಹಿಳಾಭಿವೃದ್ಧಿ ಕಾರ್ಯಕ್ರಮ

## "ಲಿಂಗ ಸಮಾನತೆ ತರಬೇತಿ"



ಡಿಸೆಂಬರ್ 11.2023 ರಂದು ಇಂದಿರನಗರ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಸಬಿತಾ ರವರು **"ಲಿಂಗ ಮತ್ತು ಲಿಂಗತ್ವಕ್ಕೆ"** ಇರುವ ವ್ಯತ್ಯಾಸ ಕುರಿತು ತರಬೇತಿ ನೀಡಿದರು. ಲಿಂಗ ಎಂದರೆ ದೇವರ ದೃಷ್ಟಿಯಲ್ಲಿ ಸಮಾನರು ಇದು ಪ್ರಕೃತಿಯ ನೀಯಮವಾಗಿದೆ. ಲಿಂಗತ್ವ ಎಂದರೆ ಸಮಾಜದಲ್ಲಿ ಬೆಳೆದು ಬಂದ ಪದ್ದತಿ. ಹೆಣ್ಣು ಮನೆಗೆ ಮಾತ್ರ ಮೀಸಲು, ಗಂಡಿಗೆ ಇರುವ ಸ್ವಾತಂತ್ರ್ಯ ಸ್ತ್ರೀಗಿರುವುದಿಲ್ಲ ಎನ್ನುವ ನೀಯಮ ಸಮಾಜದಲ್ಲಿ ರೂಡಿಗತವಾಗಿದೆ. ನಮ್ಮ ಕುಡುಂಬಗಳಲ್ಲಿ ಗಂಡಿಗೂ –ಹೆಣ್ಣಿಗೂ ಸಮಾನ ಅವಕಾಶ ಮತ್ತು ಸ್ಥಾನಮಾನ ಕಲ್ಪಿಸಬೇಕು. ಲಿಂಗ ತಾರತಮ್ಯ ಮಾಡಬಾರದು ಎಂದು ತಿಳಿಸಿದರು. ಈ ತರಬೇತಿಯಲ್ಲಿ 16 ಸದಸ್ಯರು ಭಾಗವಹಿಸಿ ಲಿಂಗ ಮತ್ತು ಲಿಂಗತ್ವದ ವ್ಯತ್ಯಾಸದ ಕುರಿತು ಮತ್ತು ಸಮಾಜದಲ್ಲಿ ನೆಡಯುವಂತಹ ಕಟ್ಟುಪಾಡುಗಳ ಹಾಗೂ ಭಿನ್ನಾಭಿಪ್ರಾಯಗಳ ಕುರಿತು ಮಾಹಿತಿಯನ್ನು ಪೆಡದುಕೊಂಡರು.

## "ಆರೋಗ್ಯವೆ ಭಾಗ್ಯ"



ಡಿಸೆಂಬರ್ 12 2023 ರಂದು ಬಸವಕಲ್ಯಾಣ ತಾಲೂಕಿನ ಎರಂಡಿ ಗ್ರಾಮದಲ್ಲಿ ಸ್ವ–ಸಹಾಯ ಸಂಘದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಕಲ್ಪನ ರವರು ಆರೋಗ್ಯ ಕುರಿತು ತರಬೇತಿಯನ್ನು ಹಮ್ಮಿಕೊಂಡರು. ಆರೋಗ್ಯವೆ ಭಾಗ್ಯ ಎನ್ನುವ ನಾಲ್ಮುಡಿಯಂತೆ ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ ಅತಿ ಅವಶ್ಯಕವಾಗಿದೆ.ಹಿಗಾಗಿ ತರಕಾರಿ, ಹಣ್ಣು–ಹಂಪಲುಗನ್ನು ಸೇವಿಸಬೇಕು.ದಿನನಿತ್ಯ ವ್ಯಾಯಮ ಮಾಡಬೇಕು, ಜೋತೆಗೆ ವೈಯಕ್ತಿಕ ಸ್ವಚ್ಚತೆಯನ್ನು ಕಾಪಾಡಿಕೊಳ್ಳಬೇಕು ಎಂದು ವಿಸ್ತಾರವಾಗಿ ತಿಳಿಸಿದರು. ಈ ತರಬೇತಿಯಲ್ಲಿ 15 ಜನರು ಭಾಗವಹಿಸಿ ಸದೃಢ ಆರೋಗ್ಯ ಮನುಷ್ಯನಿಗೆ ಅತಿ ಅವಶ್ಯಕ ಎಂಬುದರ ಕುರಿತು ತಿಳಿದುಕೊಂಡರು.

## “ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿ”



ಡಿಸೆಂಬರ್ 12.2023 ರಂದು ಚಿಟಗುಪ್ಪಾ ತಾಲೂಕಿನ ವಡ್ಡನಕೆರಾ ಗ್ರಾಮದಲ್ಲಿ ಸ್ವ-ಸಹಾಯ ಸಂಘದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಅಮಿತಾ ರವರು ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿಯನ್ನು ಹಮ್ಮಿಕೊಂಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ರೀಟಾ ಮಹಿಳಾ ಸಬಲೀಕರಣ ಕಾರ್ಯಕ್ರಮದ ಕಾರ್ಯಕರ್ತೆ ಇವರು ಸಂವಿಧಾನವು ಜನಸಾಮನ್ಯರಿಗೂ ಸಮಾನವಾದ ಹಕ್ಕುಗಳನ್ನು ಕಲ್ಪಿಸಿಕೊಟ್ಟಿದೆ.ಜಾತಿ, ಮತ ಭೇದವಿಲ್ಲದೆ ಸಮಾಜದ ಒಳತಿಗಾಗಿ ನಾವೆಲ್ಲರು ದುಡಿಯೋಣ ಎಂದು ಸಮಾನತೆಯ ತರಬೇತಿ ನೀಡಿದರು. ಈ ತರಬೇತಿಯಲ್ಲಿ 15 ಜನರು ಭಾಗವಹಿಸಿ ಸಂವಿಧಾನದ ಪೀಠಿಕಾ ಭಾಗವನ್ನು ಅರ್ಥೈಸಿಕೊಂಡರು.

## “ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ”




ಭಾಲ್ಕಿ ತಾಲೂಕಿನ ಹಾಲಹಿಪ್ಪರ್ಗಾ ಗ್ರಾಮದಲ್ಲಿ 14 ಡಿಸೆಂಬರ್ 2023 ರಂದು ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಸ್ಥಳಿಯ ಸಂಯೋಜಕಿಯಾದ ಸಿಸ್ಟರ್ ಜೀವಲತಾ ರವರು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ನಡೆಸಿಕೊಟ್ಟರು. ಕ್ಯಾನ್ಸರ್ ಎಂದರೇನು? ಕ್ಯಾನ್ಸರ್ ಲಕ್ಷಣಗಳು, ಕ್ಯಾನ್ಸರ್‌ನ ವಿಧಗಳು, ಕ್ಯಾನ್ಸರ್ ಹೇಗೆ ಬರುತ್ತದೆ ಹಾಗೂ ಕ್ಯಾನ್ಸರ್ ರೋಗದಿಂದ ಹೇಗೆ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು. ಮಹಿಳೆಯರಲ್ಲಿ ಹೆಚ್ಚಾಗಿ ಸ್ತನಕ್ಯಾನ್ಸರ್ ರೋಗವು ಕಂಡುಬರುತ್ತದೆ ಎಂದು ತಿಳಿಸಿದರು.ಈ ಕಾರ್ಯಕ್ರಮದಲ್ಲಿ ಒಟ್ಟು 15 ಸ್ವ-ಸಹಾಯ ಸಂಘದ ಮಹಿಳೆಯರು ಭಾಗವಹಿಸಿದರು.

## “ಉಚಿತ ಕಾನೂನ ತರಬೇತಿ”



15 ಡಿಸೆಂಬರ್ 2023 ರಂದು ಚಿಟಗುಪ್ಪ ತಾಲೂಕಿನ ನಿರ್ಣಾ ಗ್ರಾಮದಲ್ಲಿ ಎರಡು ಸ್ವ-ಸಹಾಯ ಸಂಘದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ರೀಟಾ ರವರು ಉಚಿತ ಕಾನೂನ ತರಬೇತಿ ನೀಡಲಾಯಿತು.ಶ್ರೀಮತಿ ರೀಟಾ ರವರು ಮಾತನಾಡಿ. ಆಸ್ತಿ ಹಕ್ಕು, ಕೌಟುಂಬಿಕ ದೌರ್ಜನ್ಯ, ದತ್ತು ಮಕ್ಕಳನ್ನು ಹೀಗೆ ತೆಗೆದುಕೊಳ್ಳುವುದು ಹಾಗೂ ಪೋಸ್ಕೊ ಕಾಯ್ದೆ ಅಡಿಯಲ್ಲಿ ಮಕ್ಕಳನ್ನು ಹೇಗೆ ರಕ್ಷಣೆ ಮಾಡಬೇಕು ಎಂಬುದರ ಕುರಿತು ವಿಸ್ತಾರವಾಗಿ ತಿಳಿಸಿದರು. ಈ ತರಬೇತಿಯಲ್ಲಿ ಒಟ್ಟು 25 ಜನ ಮಹಿಳೆಯರು ಭಾಗವಹಿಸಿ ಉಚಿತ ಪ್ರಾಧಿಕಾರ ಸೇವೆ ಕುರಿತು ತಿಳಿದುಕೊಂಡರು.

## “ದಾಖಲಾತಿ ನಿರ್ವಹಣೆ ತರಬೇತಿ”



ಭಾಲ್ಕಿ ತಾಲೂಕಿನ ಕಲ್ವಾಡಿ ಗ್ರಾಮದಲ್ಲಿ 11 ಡಿಸೆಂಬರ್ 2023 ರಂದು ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ರವರು ಮೂರು ಸ್ವ-ಸಹಾಯ ಸಂಘದ ಪದಾಧಿಕಾರಿಗಳಿಗೆ ಮತ್ತು ಸದಸ್ಯರಿಗೆ ದಾಖಲಾತಿ ನಿರ್ವಹಣೆ ತರಬೇತಿ ಹಮ್ಮಿಕೊಂಡರು. ಸಂಘದಲ್ಲಿ ಇಡಬೆಕಾದ ದಾಖಲಾತಿಗಳ ಬಗ್ಗೆ ತಿಳಿಸುತ್ತ ಚರ್ಚಾ ಪುಸ್ತಕ, ಉಳಿತಾಯ ಪುಸ್ತಕ, ಸಾಲದ ಪುಸ್ತಕ, ನಗದು ಪುಸ್ತಕ ಹಾಗೂ ಸಾಮನ್ಯ ಖಾತೆ.ಈ ಪುಸ್ತಕಗಳು ಸಂಘದ ಸಭೆಯಲ್ಲಿ ಕಡ್ಡಾಯವಾಗಿ ಯಾವರಿತಿ ಬರೆಯಬೆಕೆಂಬುದನ್ನು ತಿಳಿಸಿದರು.ಈ ತರಬೇತಿಯಲ್ಲಿ 23 ಮಹಿಳೆಯರಿಗೆ ಭಾಗವಹಿಸಿದರು.

## “ಹಕ್ಕು ಒತ್ತಾಯ ಜಾಲಬಂದ ತರಬೇತಿ”

19ಡಿಸೆಂಬರ್ 2023 ರಂದು ಭಾಲ್ಕಿ ತಾಲೂಕಿನ ಕೋಸಂ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಸ್ಥಳಿಯ ಸಂಯೋಜಕಿಯಾದ ಸಿಸ್ಟರ್ ಜೀವಲತಾ ರವರು ಆರು ಸ್ವ–ಸಹಾಯ ಸಂಘದ ಮಹಿಳೆಯರಿಗೆಹಕ್ಕು ಒತ್ತಾಯ ಜಾಲಬಂದ ಕುರಿತು ತರಬೇತಿಯನ್ನು ಹಮ್ಮಿಕೊಂಡಿದರು.ಸಿಸ್ಟರ್ ಜೀವಲತಾ ರವರು ಮಾನವ ಹಕ್ಕುಗಳ ವಿವಿಧ ರೀತಿಯಲ್ಲಿ ಒಳಗೊಂಡಿರುವ ಶಿಕ್ಷಣಿಕಹಕ್ಕು, ಸ್ವಾತಂತ್ರ್ಯದ ಹಕ್ಕು, ರಕ್ಷಣೆ ನ್ಯಾಯಯುತ ವಿಚಾರಣೆ ಹಕ್ಕು ಹಾಗೂ ಶಕ್ಷಣ ಸ್ವಾತಂತ್ರ್ಯ ಮತ್ತು ಭಾರತ ದೇಶದ ಸಂವಿಧಾನದ 28 ಕೇಂದ್ರಾಡಳಿತ ಕುರಿತು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ 20 ಜನ ಸಂಘದ ಮಹಿಳೆಯರಿಗೆ ಒಗ್ಗಟ್ಟು ಸೌಹಾರ್ದತೆ ವಿಚಾರ ವಿನಿಮಯದಲ್ಲಿ ಇನ್ನು ಹೆಚ್ಚಾಗು ಉತ್ತಿರ್ಣರಾಗಬೇಕೆಂದು ಈ ತರಭೇತಿಯಿಂದ ಮಾಹಿತಿ ಪಡೆದುಕೊಂಡರು.




## ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ

### ಮಾನಸಿಕಆರೋಗ್ಯಕುರಿತುಜಾಗೃತಿಕಾರ್ಯಕ್ರಮ



13 ಡಿಸೆಂಬರ 2023 ರಂದು ಬಸವಕಲ್ಯಾಣ ತಾಲೂಕಿನ ಯರಬಾಗ ಗ್ರಾಮದ ಶ್ರೀ ಮತಿ ಗುರುಲಿಂಗಮ್ಮ ಪಾಟೀಲ್ ಅಟ್ಟೂರ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ( ಎಲ್.ಎಲ್.ಎಲ್.ಎಫ್) ಸಂಯುಕ್ತಾಶ್ರದಲ್ಲಿ ಶಾಲಾ ಮಕ್ಕಳಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವಗಯಕ್ತಿಯಾಹಿ ಶ್ರೀ ವಿಜಯಕುಮಾರ ಕಾರ್ಯಕರ್ತರು ಮಾತನಾಡಿ, ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆಯ ಲಕ್ಷಣಗಳು ಮತ್ತು ಮಾನಸಿಕ ಕಾಯಿಲೆಗೆ ಕಾರಣಗಳು ತಿಳಿಸಿದರು. ಮಾನಸಿಕ ಕಾಯಿಲೆಯ ಬಗ್ಗೆ ಜನರಲ್ಲಿ ಇರುವ ತಪ್ಪು ಕಲ್ಪನೆಗಳು ಹೊಗಲಾಡಿಸಿ ಪ್ರಾರಂಭದಲ್ಲಿ ಮಾನಸಿಕ ಅಸ್ವಸ್ಥರನ್ನು ಪತ್ತೆ ಹಚ್ಚಿ ಅವರನ್ನು ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತ ವೈದ್ಯಕೀಯ ತಪಾಸಣೆ ಹಾಗೂ ಚಿಕಿತ್ಸೆ ಮೂಲಕ ಸ್ಪಂದಿಸಿ ಮಾನಸಿಕ ಅಸ್ವಸ್ಥರನ್ನು ಸಮಾಜದಲ್ಲಿ ಮುಖ್ಯ ಮಾಹಿತಿಗೆ ಕರೆತರಬಹುರು ಎಂದರು. ಈ ಕಾರ್ಯಕ್ರಮದಲ್ಲಿ ಶಿಕ್ಷಕರು ಮಕ್ಕಳು ಸೇರಿ ಒಟ್ಟು 79 ಜನರು ಭಾಗವಹಿಸಿದರು.

ದಿನಾಂಕ 28.012.2024 ರಂದು ಔರಾದ ತಾಲೂಕಿನ ಜಮಾಲಪೂರ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ (ಎಲ್.ಎಲ್.ಎಲ್.ಎಫ್) ಸಂಯುಕ್ತಾಶ್ರದಲ್ಲಿ ಶಾಲಾ ಮಕ್ಕಳಿಗೆ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವಗಯಕ್ತಿಯಾಹಿ ಶ್ರೀ ರಫಿಕ್ ರವರು ಮಾತನಾಡುತ್ತಾ, ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಆರೋಗ್ಯ ಲಕ್ಷಣಗಳು, ಮಾನಸಿಕ ಕಾಯಿಲೆ ಬಂದಾಗ ಏನು ಮಾಡಬೇಕು ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಸರಕಾರಿ ಶಾಲೆಯ ಮುಖ್ಯಗುರುಗಳು, ಶಿಕ್ಷಕರು ಹಾಗೂ ಮಕ್ಕಳು ಸೇರಿ ಒಟ್ಟು 50 ಜನರು ಭಾಗವಹಿಸಿದರು.



# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

## "ಕ್ರಿಸ್ಮಸ್ ಸೌಹಾರ್ದ ಕೂಟ"



ದಿನಾಂಕ 20.12.2023 ರಂದು ಹುಮ್ನಾಬಾದ್ ತಾಲೂಕಿನ ಜಲಸಂಗಿ ಮರಿಯಾಶ್ರಮದಲ್ಲಿ ನಿರ್ದೇಶಕರಾದ ಫಾದರ್ ವಿನ್‌ಸೆಂಟ್ ತೋರಸ್ ಸಹಯೋಗದೊಂದಿಗೆ ಕ್ರಿಸ್ಮಸ್ ಸೌಹಾರ್ದ ಕೂಟವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಜಲಸಂಗಿ ಕೇಂದ್ರದ ಸಹ ನಿರ್ದೇಶಕರಾದ ಫಾದರ್ ಸಚಿನ್, ಸಿಸ್ಟರ್ ಪ್ರೀತಿ ಮತ್ತು ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಮತ್ತು ಸಹ ನಿರ್ದೇಶಕರಾದ ಫಾದರ್ ವಿಜಯಕುಮಾರ್. ಕಾರ್ಯಕ್ರಮದ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾ ಮ್ಯಾಥ್ಯೂ ಭಾಗವಹಿಸಿದರು.ಕನಕಟ್ಟಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ, ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಸಮೂದಾಯ ಆರೋಗ್ಯ ಅಧಿಕಾರಿ, ಆಶಾ ಕಾರ್ಯಕರ್ತರು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.ನಿರ್ದೇಶಕರಾದ ಫಾದರ್ ವಿಕ್ಟರ್ ರವರು ಮಾತನಾಡುತ್ತ ಸಮಾಜದಲ್ಲಿ ನಮ್ಮ ಆರ್ಬಿಟ್ ಸಂಸ್ಥೆಯು ಮೂಖಾಂತರ ಅನೇಕ ಜನರಿಗೆ ನಾವು ಸೇವೆಯನ್ನು ನೀಡುತಿದ್ದೆವೆ. ಯೇಸು ತೋರಿಸಿದ ಮಾರ್ಗದಲ್ಲಿ ಜೀವನ ನಡೆಸುತದ್ದೆವೆ. ಸಂತೋಷದ ಜೀವನ ಹಾಗೂ ಪರಸ್ಪರ ಪ್ರೀತಿ, ಸಹೊದರತೆಂಯಿಂದ ಜೀವನ ನಡೆಸಬೇಕೆಂದು ಕರೆ ನೀಡಿದರು.ಈ ಕ್ರಿಸ್ಮಸ್ ಸೌಹಾರ್ದ ಕೂಟದಲ್ಲಿ ಒಟ್ಟು 150 ಜನರು ಹಾಗೂ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರು ಮತ್ತು ಶಿಘ್ರ ಪತ್ತೆ ಹಚ್ಚುವಿಕೆ ಕಾರ್ಯಕ್ರಮದ ಕಾರ್ಯಕರ್ತರು ಭಾಗವಹಿಸಿದರು



## "ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಟುವಟಿಕೆ"



11 ಡಿಸೆಂಬರ್ 2023 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ್ (ಬಿ) ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಸಂಯೋಜಕರಾದ ಶ್ರೀಮತಿ ಮಮತಾ ರವರು ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಗುವನ್ನು ಪತ್ತೆ ಹಚ್ಚಿ, ಮಗುವಿನ ಮನೆ ಭೇಟಿ ನೀಡಿ ಮಗುವಿನ ಮೌಲ್ಯಮಾಪನ ಮಾಡಿ, ಚಟುವಟಿಕೆಯನ್ನು ಮಾಡಿಸಿದರು. ಮೂರು ಗಾಲಿಯ ಕಟ್ಟಿಗೆಯ ಚಕ್ರವನ್ನು ಹಿಡಿದುಕೊಂಡು ನಡೆಸಲು ಕಲಿಸಿಕೊಡಲಾಯಿತು. ಮಗುವಿನ ಪೊಷಕತಿಗೆ ದಿನಾಲು ಈ ರಿತಿಯ ಚಟುವಟಿಕೆಯನ್ನು ಮಾಡಿಸಿರಿ ಎಂದು ಸಲಹೆ ನೀಡಿದರು. ಮಗುವು ಸದ್ಯದ ಪರಿಸ್ಥಿಯಲ್ಲಿ 60 % ಬದಲಾವಣೆ ಹೊಂದಿದ್ದಾನೆ.

## "ಕ್ರೀಸ್ತಮಸ್ ಹಬ್ಬ ಸಂತೋಷದ ಹಬ್ಬ"



ಹುಮ್ನಾಬಾದ್ ತಾಲೂಕಿನ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ 23 ಡಿಸೆಂಬರ್ 2023 ರಂದು ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆಯ ನಿರ್ದೇಶಕರ ನೈತೃತ್ವದಲ್ಲಿ ಎರಡು ಸಂಸ್ಥೆಗಳ ಸಿಬ್ಬಂದಿ ವರ್ಗದವರ ಕುಟುಂಬದವರೊಂದಿಗೆ ಯೇಸುವಿನ ಜನನ ಮಹೊತ್ಸವ (ಕ್ರೀಸಮಸ್) ಕಾರ್ಯಕ್ರಮವನ್ನು ವಿಜ್ರಂಭಣೆಯಿಂದ ಆಚರಿಸಲಾಯಿತ್ತು. ಫಾದರ್ ಮಾರ್ಕ ಮುಚಳಂಬ ಕೇಂದ್ರದ ನಿರ್ದೇಶಕರು ಯೇಸುವಿನ ಜನನ ಕುರಿತು ಸಂದೇಶವನ್ನು ನೀಡಿದರು. ಕುಟುಂಬದಲ್ಲಿ ಪ್ರಾರ್ಥನೆ, ದೇವರ ವಾಕ್ಯ ಇದ್ದರೆ ಪ್ರಿತಿ, ಶಾಂತಿ ಸಮಾದಾನ ನೆಲೆಗೊಳ್ಳುತ್ತದೆ. ಕುಟುಂಬ ಬೆಳೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಆರ್ಬಿಟ್ ಮತ್ತು ಸೇವಾ ಸಂಗಮ ಸಿಬ್ಬಂದಿ ವರ್ಗದವರಿಂದ ಸಂಸ್ಕೃತಿಕ ಕಾರ್ಯಕ್ರಮಗಳು ಮಾಡಲಾಯಿತು. ಆಟೋಟ ಸ್ಪರ್ದೆಗಳನ್ನು ಏರ್ಪಡಿಸಿ ಗೆದ್ದವರಿಗೆ ಬಹುಮಾನಗಳನ್ನು ವಿತರಣೆ ಮಾಡಿದರು. ಹಾಗೂ ಸಂಸ್ಥೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಕ್ರೀಸ್ತಮಸ್ ಹಬ್ಬದ ಪ್ರಯುಕ್ತ ಹುಡುಗೊರೆಗಳನ್ನು ನೀಡಿದರು. ಕಾರ್ಯಕ್ರಮದ ಕೊನೇಯಲ್ಲಿ ಶ್ರೇಷ್ಠಗುರುಗಳಾದ ಫಾದರ್ ಸ್ಟ್ಯಾನಿ ಲೋಬೊರವರು ಕ್ರೀಸಮಸ್ ಸಂದೇಶವನ್ನು ನೀಡಿ ಕ್ರೀಸಮಸ್ ಹಾಗೂ ವರುಷದ ಶುಭವನ್ನು ಕೊರಿದರು.





**ಸೇವಾ ಸಂಗಮ ಸಂಸ್ಥೆ, ಕಲಬುರಗಿ**

## "ಉಜ್ಜೀವನ ಕಾರ್ಯಕ್ರಮ"

### "ಜನರ ಜೀವನಮಟ್ಟದ ಸುಧಾರಣೆಯೇ ಗ್ರಾಮೀಣ ಮಟ್ಟದ ಉತ್ತಮ ಬೆಳವಣಿಗೆ"



ದಿನಾಂಕ 18/12/23 ರಂದು ಕಲಬುರಗಿ ಜಿಲ್ಲೆಯ ಧರ್ಮಪುರ ಮತ್ತು ಉದನೂರ ಗ್ರಾಮದ ಮಹಿಳಾ ಸ್ವ-ಸಹಾಯ ಸಂಘದ 30 ಜನ ಸದಸ್ಯರಿಗೆ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತಿಯಾದ ಶ್ರೀಮತಿ ನಂದಿನಿ ರವರು ಪ್ರಧಾನ ಮತ್ರಿ ಉಜ್ವಲಾ ಯೋಜನೆಯ ಅಡಿಯಲಿ ಸರಕಾರದಿಂದ ದೋರೆಯುವ ಮೂಲ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಇದರ ಪ್ರೇರಣೆಯನ್ನು ಪಡೆದುಕೋಂಡು 18 ಜನಗ್ರಾಮಕ್ಕೆ ಹೋಗಿ ಅರ್ಜಿಗಳನ್ನು ನೋಂದಣಿ ಮಾಡಲುದಾಖಲೆಗಳನ್ನು ತಗೆದುಕೊಂಡು ನಂದೂರ (ಕೆ)ಗ್ರಾಮಕ್ಕೆ ಹೋಗಿ ಅರ್ಜಿಗಳನ್ನು ಸಲ್ಲಿಸಿಲಾಯಿತ್ತು.

## "ನೈಸರ್ಗಿಕ ಕೃಷಿಯ ಪದತಿಯ ಹಾಗೂ ಎರೆಹುಳ ತಯಾರಿಕೆ ಕುರಿತು ತರಬೇತಿ"




ಡಿಸೆಂಬರ 13 ರಿಂದ 15 ರವರೆಗೆ ತೆಲಂಗಾಣ ರಾಜ್ಯದ ವಾರಂಗಲ ಜಿಲ್ಲೆಯಲಿ ಉಜ್ಜೀವನ ಮೂರನೇ ಹಂತದ ನೈಸರ್ಗಿಕ ಕೃಷಿಯ ಪದತಿಯ ಮತ್ತು ಸಾವಯವ ಕೃಷಿ ಹಾಗೂ ಮಣ್ಣು ತಪಾಷೇಣೆ ಎರೆಹುಳ ತಯಾರಿಕೆ ಕುರಿತು ಬಗ್ಗೆ ತರಬೇತಿ ಕಾರ್ಯಕ್ರಮವನು ಆಯೋಜಿಸಲಾಗಿತು.ಈ ತರಬೇತಿಯಲ್ಲಿ ನಾಲ್ಕೂ ಸಂಸ್ಥೆಯ ಮತ್ತು ತೆಲಂಗಾಣ ರಾಜ್ಯದ ಮೂರು ಸಂಸ್ಥೆಗಳ ಮುಖ್ಯಸ್ಥರು ಮತ್ತು ಕಾರಿತಾಸ ಇಂಡಿಯಾದ ಎಲ್ಲಾ ಸೀಬಂದಿ ವರ್ಗದವರು ಹಾಗೂ ಸಂಸ್ಥೆಗಳ ಸಂಯೋಜಕರು 30 ಜನ ಭಾಗವಹಿಸಿ ತರಬೇತಿಯನು ಪಡೆದುಕೋಳಲಾಯಿತು.

## "ನೈಸರ್ಗಿಕ ಕೃಷಿ ಪದ್ದತಿಯೇ ಉತ್ತಮ ಆರೋಗ್ಯಕರ ಜೀವನ"

ಡಿಸೆಂಬರ 6 ರಂದು ಕಲಬುರಗಿ ತಾಲೂಕಿನ ಹೋನ್ನಕಿರಣಗಿ ಗ್ರಾಮದಲಿ ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ಯತನಾದ ಶ್ರೀಮತಿ ಇಂದು ರವರು ರೈತರು ಬೆಳೆದಿರುವ ಕೃಷಿ ಬೇಳೆಗಳ ಬಗ್ಗೆ ಹಾಗೂ ಭೂಮಿಯ ಫಲವತತೆಯನ್ನು ಕಾಪಾಡಿಕೋಳಲು ರಾಸಾಯನಿಕ ಗೋಬ್ಬರ ಹಾಗೂ ಜೀವಾಮೃತ ಎಣ್ಣೆಗಳನು ಸಿಂಪಡನೆ ಮಾಡುವ ಮೂಲಕ ಸೂಕ್ತ ಬೇಳೆಗಳ ಇಳುವರಿಯನು ಹೇಚ್ಚಿಸುವ ಮೂಲಕ ಲಾಭ ಪಡೆಯಬಹುದು. ಕುಟುಂದ ಆಹಾರ ಪದ್ದತಿಯನು ಕಾಪಾಡುವುದರ ಮೂಲಕ ಆರೋಗ್ಯ ಭಾಗ್ಯವನ್ನು ಪಡೆಯಿವುದು. ಈ ಕಾರ್ಯಕ್ರಮದಲ್ಲಿ 15 ಜನ ರೈತರು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೋಂಡರು,



## "ರೈತ ದೇಶದ ಬೆನ್ನೆಲಬು ರೈತನ ಮೂಲ ಕಸಬು ಕೃಷಿ"

ಡಿಸೆಂಬರ್ 5 ರಂದು ಕಲಬುರಗಿ ಜಿಲ್ಲೆಯ ಉದನೂರ ಗ್ರಾಮಕ್ಕೆ ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತಳಾದ ಶ್ರೀಮತಿ ನಂದಿನಿ ರವರು, ವಿಶ್ವ ಮಣ್ಣು ದಿನಾಚರಣೆಯ ಪ್ರಯುಕ್ತ ಉದನೂರ ಗ್ರಾಮದ ರೈತರಾದ, ಶ್ರೀ ಸಿದ್ದಾರೂಡ ಕೋಟನೂರ್ ರವರ ಹೊಲದಲ್ಲಿ ಮಣ್ಣಿನ ತಪಾಷಣೆಯ ಕುರಿತು ಮಣ್ಣಿನ ಫಲವತತ್ತೆಯ ಬಗ್ಗೆ ಕಾರ್ಯಕ್ರಮವನ್ನು ಆಯೋಜಿಸಿದರು, ಸಂಪನ್ಮೂಲ ವ್ಯಕ್ತಿಯಾಗಿ ರೈತ ಸಂಪರ್ಕ ಕೆಂದ್ರದ ಅದಿಕಾರಿಯಾದ ಶ್ರೀಮತಿ ಶೃತಿ ಮೇಡಂ ಅವರು ಮಣ್ಣು ತಪಾಸಣೆ ಮಾಡುವ ಮೂಲಕ ರೈತ ಭಾಂದವರಿಗೆ ಭೂಮಿಯ ಫಲವತತೆಯನು ಕಾಪಾಡಿಕೋಳಲು ನೈಸರ್ಗಿಕ ಸಾವಯವ ಸೂಕ್ತ ಕೃಷಿ ಪದ್ದತಿಯನು ಅಳವಡಿಸಿಕೋಳುವ ಮೂಲಕ ರೈತ ಸಂಪರ್ಕ ಇಲಾಖೆಯಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನಿಡಿದರು. ಭಾರತ ದೇಶವು ಸೇಕಡಾ 57% ರಷ್ಟು ಕೃಷಿಯ ಮೇಲೆ ಹೆಚ್ಚು ಅವಲಂಬಿತವಾಗಿ ಜೀವಿಸುತ್ತದೆ.



## ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕಮ

## “ಭವಿಷದ ಬಲಿಷ್ಠ ರಾಷ್ಟ್ರ ನಮ್ಮ ಭಾರತ”





ಡಿಸೆಂಬರ 30 ರಂದು ಕಲಬುರ್ಗಿ ಜಿಲ್ಲೆಯ ಸೇವಾ ಸಂಗಮ ಸಂಸ್ಥೆಯಸಂಜೆಯ ಕಲಿಕಾ ಕೇಂದ್ರದ ಮಕ್ಕಳಿಗೆಮದರ್ ತೆರೇಸಾ ಸಭಾಂಗಣದಲ್ಲಿ**“ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು”**. “ಇಂದಿನ ಮಕ್ಕಳನ್ನು ಇಂದಿನ ಪ್ರಜೆಗಳಂತೆ ನಾವು ಗೌರವಿಸಿ ಅವರ ಜೀವನಕ್ಕೆ ಬೇಕಾಗುವ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವುದು ಪ್ರಮುಖವಾಗಿ ಉತ್ತಮ ಬಾಲ್ಯ, ಉತ್ತಮ ಆರೋಗ್ಯ, ಮಕ್ಕಳ ಸರ್ವಾಂಗಿಣ ಅಭಿವೃದ್ಧಿಗಾಗಿ ಉತ್ತಮ ಶಿಕ್ಷಣ ನಿಡಬೇಕು, ಅವರಿಗೆ ಸಂರಕ್ಷಣೆಯನ್ನು ಒದಗಿಸುವ ಮೂಲಕ ಸಮಾಜದಲ್ಲಿ ಅವರಿಗಾಗಿ ಗೌರವ ಹಾಗೂ ಘನತೆಯುತ್ತವಾದ ಪರಿಸರವನ್ನು ನಿರ್ಮಾಣ ಮಾಡಬೇಕೆಂದು ವಲಯ ಆಯುಕ್ತಕರಾದ ಶ್ರೀರಮೇಶ ಪಟೇದಾರ್ತಿಳಿಹೇಳಿದರು.ಶ್ರೀ ಮಹಾದೇವಪ್ಪ ಜಿಲ್ಲಾ ಸಂಯೋಜಕರು ಅಜೀಮ್ ಪ್ರೇಮಜಿ ಪೌಂಡೇಶನ್ ಕಲಬುರಗಿ ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಕ್ಕಳ ಮನಸ್ಸು ಕೈಗನ್ನಡಿಯಂತೆ ಹಂತವಾಗಿ ಮಕ್ಕಳನ್ನು ಪಾಲನೆ ಪೋಷಣೆ ಮಾಡುವ ಮೂಲಕ ಅವರ ಜೀವನವನ್ನು ಉತ್ತಮವಾಗಿ ರೂಪಿಸುವಲ್ಲಿ ತಂದೆ ತಾಯಿಯ ಹಾಗೂ ಶಿಕ್ಷಕರ ಪಾತ್ರವು ಮಹತ್ವದಾಗಿದೆ ಎಂದು ಹೇಳಿದರು.ಫಾದರ ವಿಕ್ಟರ್ ವಾಸ್ ನಿರ್ದೇಶಕರು ಸೇವಾ ಸಂಗಮ ಸಂಸ್ಥೆ, “ಕೆಳದ ಒಂದು ವರ್ಷದಿಂದ ಗುಲ್ಬರ್ಗಾದ ಸ್ಲಂ ಗಳಲ್ಲಿ ಮಕ್ಕಳ ಉತ್ತಮ ಶಿಕ್ಷಣಗೊಸ್ಕರ ಸಾಯಂಕಾಲದ ಕಲಿಕಾ ಕೇಂದ್ರಗಳನ್ನು ತೆರೆದು ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯಲು ಸಾಹಾಯ ಮಾಡುವುದರಲ್ಲಿ ಪ್ರಯತ್ನಿಸುತ್ತಿದ್ದೇವೆ ಎಂದುಪ್ರಾಸ್ತವಿಕವಾಗಿ ಮಾತನಾಡಿದರು.ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ವತಿಯಿಂದ ಸಂಜೆಯ ಕಲಿಕಾ ಕೇಂದ್ರದ 110 ಮಕ್ಕಳಿಗೆ ನೋಟ್ ಬುಕ್ ವಿರತಣೆ ಮಾಡಲಾಯಿತ್ತು.



## "ಸಾಧನೆ ಮಾಡಲು ಸದೃಢವಾದ ಸಂಕಲ್ಪ ಹೊಂದಿರಬೇಕು"





"ಸಾಧನೆ ಮಾಡಲು ಸದೃಢವಾದ ಸಂಕಲ್ಪ ಹಾಗೂ ಸಾಧಿಸುವ ಛಲವನ್ನು ಹೊಂದಿರಬೇಕು" ನಮ್ಮಗೆ ಇರುವ ಯಾವುದೇ ರೀತಿಯಾ ನ್ಯುನತೆ ನೇಪ ಮಾಡಿ ನಾವು ಸುಮನಾದರೆ ನಿಮ್ಮ ಬದುಕಿಗೆ ಏನು ಅರ್ಥವನ್ನು ನೀಡುತ್ತಿರಿ ಪ್ರತಿಯೋಬ್ಬ ಮನುಷ್ಯ ಆಘಾದವಾದ ಪ್ರತಿಭೆಯನ್ನು ಹೊಂದಿರುತ್ತಾನೆ. ಪ್ರತಿ ಯೋಬ್ಬರು ಒಂದು ಗುರಿಯನ್ನು ಹೊಂದಿರಬೇಕು ಮತ್ತು ಅದನ್ನು ಸಾಧಿಸಬೇಕು ಎಂದು ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದ ಡಾ॥ ಸಂತೋಷ ಪಾಟೀಲ್ ಆಡಳಿತ ವೈಧ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ ಫರಹತಬಾದ ಹೇಳಿದರು.ಶ್ರೀ ಖಾಸಿಂ ಎಮ್.ಆರ್.ಡಬ್ಲ್ಯು ಕಾರ್ಯಕ್ರಮದಲ್ಲಿ ಮಾತನಾಡಿ "ವಿಶ್ವ ವಿಕಲ ಚೇತನರ ದಿನಾಚರಣೆ ಕಾರ್ಯಕ್ರಮವನ್ನು" ಪ್ರತಿ ವರ್ಷ ಆಚರಿಸುವುದು ವಿಕಲಚೇತನರಿಗೆ ಸಮಾಜದ ಮುಖ್ಯವಾಹಿನಿಗೆ ತರುವುದಾಗಿದೆ ಹಾಗೂ ವಿಕಲಚೇತನರ ಅಭಿವೃದ್ಧಿಗಾಗಿ ಸರಕಾರದ ಕಾರ್ಯಕ್ರಮಗಳು ಕುರಿತು ಅವರಲ್ಲಿ ಜಾಗೃತಿಯನ್ನು ಮೂಡಿಸುವುದಾಗಿರುತ್ತದೆ ಎಂದು ಹೇಳಿದರು.ಶ್ರೀಮತಿ ಪ್ರೇಮ ದೊಡ್ಡಮನಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಫರಹತಬಾದ ಇವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಗ್ರಾಮ ಪಂಚಾಯತಗೆ ಬರುವ ಅನುದಾನದಲ್ಲಿ ಶೇಕಡ 5% ಪ್ರತಿಶತ ಅನುದಾನವನ್ನು ವಿಕಲ ಚೇತನರ ಅಭಿವೃದ್ಧಿಗಾಗಿ ಹಾಗೂ ಅವರ ಸಬಲೀಕರಣಕಾಗಿ ಮೀಷಲಿಡುತ್ತೇವೆ ಇದರಿಂದ ಅವರು ಸ್ವಾಲಂಬಿ ಜೀವನ ಮಾಡುವುದಕ್ಕೆ ಸಹಯವಾಗುವ ರೀತಿಯಲ್ಲಿ ವಿವಿಧ ರೀತಿಯಾ ಕೌಶಲ್ಯ ತರಬೇತಿಗಳನ್ನು ಕೋಡಿಸುವ ಪ್ರಯತ್ನವನ್ನು ಮಾಡಲಾಗುತ್ತದೆ ಎಂದು ಹೇಳಿದರು.ಕಲಬುರಗಿ ತಾಲೂಕಿನ ಫರಹತಾಬಾದ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ "ಚೇತನ ಕೇಂದ್ರದಲ್ಲಿ" ಸೇವಾ ಸಂಗಮ ಸಂಸ್ಥೆ, ಕಲಬುರಗಿ, ಅಜೀಮ್ ಪ್ರೇಮಜಿ ಫೌಂಡೇಷನ್, ಕಲಬುರಗಿ, ಇವರ ಸಂಯುಕ್ತ ಆಶ್ರಯದಲ್ಲಿ **"ವಿಶ್ವ ವಿಕಲ ಚೇತನರ ದಿನಾಚರಣೆ"** ಕಾರ್ಯಕ್ರಮವನ್ನು ಆಯೋಜಿಸಲಾಗಿತು.

## "ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಟುವಟಿಕೆ"



ಡಿಸೆಂಬರ 26 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ ಸಂಯುಕ್ತಾಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅಡಿಯಲ್ಲಿ ಅಂಬಿಕಾ ನಗರಕ್ಕೆ ಹೋಗಿ ಮಕ್ಕಳ ಮನೆ ಭೇಟಿ ಮಾಡಿ ಮಕ್ಕಳಿಗೆ ಚಟುವಟಿಕೆ ಮಾಡಿಸಲಾಯಿತು.ಮಕ್ಕಳಿಗೆ ಕುಳಿತುಕೊಳ್ಳಲು ಹಾಗೂ ನಿಂತುಕೊಳ್ಳುವ ಚಟುವಟಿಕೆ ಮಾಡಿಸಲಾಯಿತು.ಮತ್ತು ಮನೆಯಲ್ಲಿ ಇರುವಂತಹ ವಸ್ತುಗಳನ್ನು ಬಳಸಿಕೊಂಡು ಮಗುವಿಗೆ support sitting & Support standing & sensory ORO Motor ಚಟುವಟಿಕೆ ಮಾಡಿಸಲಾಯಿತು, ಸೇವಾ ಸಂಗಮ ಇಖ & ಇಇ ಕಾರ್ಯಕ್ರಮ ಕಾರ್ಯಕರ್ತೆಯಾದ ಕುಮಾರಿ ಅನೀತಾ ರವರು ಕಾರ್ಯಕ್ರಮ ನಡೆಸಿಕೊಟ್ಟರು.



ಡಿಸೆಂಬರ 12 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ ಸಂಯುಕ್ತಾಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ & ಆರಂಭಿಕ ಶಿಕ್ಷಣದ ಅಡಿಯಲ್ಲಿ ಖಾನಾಪುರ ನಗರಕ್ಕೆ ಹೋಗಿ ಐಚಿಭುಟಚಿ ಈಚಿಣುಟಚಿ ಮಗುವಿಗೆ ಮನೆ ಭೇಟಿ ಮಾಡಿ ಆ ಮಗುವಿಗೆ ನಿಂತು ಕೊಳ್ಳುವಂತಹ ಚಟುವಟಿಕೆ ಮತ್ತು ಸಹಾಯ ದಿಂದ ನಡೆಯುವಂತಹ ಚಟುವಟಿಕೆ ಮಾಡಿಸಲಾಯಿತ್ತು, ಮತ್ತು ಮಾತನಾಡುವಂತಹ ಚಟುವಟಿಕೆಯನ್ನು ಮಾಡಲಾಯಿತ್ತು. ಸೇವಾ ಸಂಗಮ EI & EE ಕಾರ್ಯಕ್ರಮ ಕಾರ್ಯಕರ್ತೆಯಾದ ಶ್ರೀಮತಿ ಜಗದೇವಿ ರವರು ಕಾರ್ಯಕ್ರಮ ನಡೆಸಿಕೊಟ್ಟರು.

## “ಉತ್ತಮ ಆರೋಗ್ಯಕ್ಕೆ ಪೌಷ್ಟಿಕ ಆಹಾರದ ಮಹತ್ವದ ಬಗ್ಗೆ ಮಾಹಿತಿ ಕಾರ್ಯಕ್ರಮ”



ದಿನಾಂಕ 28-12-2023 ರಂದು ಸೇವ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ & ಆರಂಭಿಕ ಶಿಕ್ಷಣದಡ್ಡಿಯಲ್ಲಿ ಇಂದಿರ ನಗರದಲ್ಲಿ 10 ಜನ ಮಹಿಳೆಯರಿಗೆ ಉತ್ತಮ ಆರೋಗ್ಯಕ್ಕೆ ಪೌಷ್ಟಿಕ ಆಹಾರದ ಮಹತ್ವದ ಬಗ್ಗೆ ಮಾಹಿತಿ ಕಾರ್ಯಕ್ರಮ ಮಾಡಲಾಯಿತ್ತು. “ಆರೋಗ್ಯವೇ ಭಾಗ್ಯ” ಆರೋಗ್ಯವಂತ ವ್ಯಕ್ತಿ ದೇಶದ ಆಸ್ತಿ ಆರೋಗ್ಯದಿರದಿದ್ದರೆ ಐಶ್ವರ್ಯ ಆಸ್ತಿ ಯಾವುದಕ್ಕೂ ಬೇಲೆ ಇರುವುದಿಲ್ಲ ಹಾಗಾಗಿ ನಾವು ಶಾರೀರಿಕವಾಗಿ ಮಾನಸಿಕವಾಗಿ ಎಲ್ಲಾ ರೀತಿಯಿಂದಲೂ ಆರೋಗ್ಯವಾಗಿರಬೇಕೆಂದರೆ ಸಮಯಕ್ಕೆ ಸರಿಯಾಗಿ ಪೌಷ್ಠಿಕ ಆಹರವನ್ನು ಸೇವಿಸಬೇಕು,ವ್ಯಕ್ತಿ ಹುಟ್ಟಿನಿಂದ ಆರಂಭವಾಗಿ ಬೇಳವಣಿಗೆಯ ಪ್ರತಿ ಹಂತದಲ್ಲಿ ಪೌಷ್ಠಿಕ ಆಹಾರ ಅತ್ಯಗತ್ಯ ಆರೋಗ್ಯಕರ ಆಹಾ ಪದ್ಧತಿಯ ಮೂಲಕ ಆರೋಗ್ಯ ಪಡೆಯಬಹುದು ಎಂದು ಶಿವಕಾಂತಾ ಅವರು ಮಾಹಿತಿ ನೀಡಿದರು.

## “ಪೌಷ್ಟಿಕ ಆಹಾರದ ಮಹತ್ವ ಹಾಗೂ ಸರ್ಕಾರದಿಂದ ಸಿಗುವ ಸೌಲಭ್ಯಗಳ ಕುರಿತು ಕಾರ್ಯಕ್ರಮ”



ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆಯು ಗ್ರಾಮೀಣ ಭಾಗದಲ್ಲಿ ಕಳೆದ 17 ವರ್ಷಗಳಿಂದ ಮಹಿಳೆಯರು ವಿಕಲಚೇತನರು, ಅಪೌಷ್ಠಿಕ ಮಕ್ಕಳು, ಸಣ್ಣ ರೈತರು ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಚಟುವಟಿಕೆ ನೀಡುವುದರ ಮೂಲಕ ಪಾಲಕರಿಗೂ ತರಬೇತಿ ನೀಡಿ ಮಗು ಕೇಂದ್ರ ಸ್ಥಾನಕ್ಕೆ ಮುಖ್ಯವಾಹಿನಿಗೆ ಬರುವಂತೆ ನೋಡಿಕೊಳ್ಳಬೇಕು ಎಂದು ಸಹ ನಿರ್ದೇಶಕರು ಫಾದರ್ ದೀಪಕ್ ಅವರು ವ್ಯಕ್ತಪಡಿಸಿದರು.ಪಟ್ಟಣ ಗ್ರಾಮದಲ್ಲಿ ಗ್ರಾಮ ಪಂಚಾಯತಿಯಲ್ಲಿ ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ ಕಲಬುರಗಿ ಹಾಗೂ ಅಜೀಮ್ ಪ್ರೇಮಜೀ ಪೌಂಡೇಶನ್ ಜಂಟಿಯಾಗಿ ಶೀಘ್ರ ಪತ್ತೆ ಹಚ್ಚುವಿಕೆ ಆರಂಭಿಕ ಶಿಕ್ಷಣ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಕುರಿತು ವಿಶ್ವ ವಿಕಲ ಚೇತನ ದಿನಾಚರಣೆಯನ್ನು ಉದ್ಘಾಟಿಸುತ್ತಾ, ಗ್ರಾಮೀಣ ಭಾಗದ ಜನರು ಈ ಕಾರ್ಯಕ್ರಮದ ಲಾಭಪಡೆದು ತಮ್ಮ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಳ್ಳಬೇಕೆಂದು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಪಾರ್ವತಿ ಅವರು ತಿಳಿಸಿದರು.ಸರ್ಕಾರದಿಂದ ಸಿಗುವ ಸೌಲಭ್ಯಗಳ ಕುರಿತು ವಿಕಲ ಚೇತನರಿಗೆ. ಮಕ್ಕಳಿಗೆ. ಪೋಷಕರಿಗೆ, ಗ್ರಾಮಸ್ಥರು ಇದರ ಸದುಪಯೋಗವನ್ನು ಪಡೆದುಕೊಳ್ಳಲೇಂದು ಗ್ರಾಮ ಪಂಚಾಯತಿಯ ಗಿಖಫ ಸಿದ್ದಾರೋಡ ಅವರು ತಿಳಿಸಿದರು.ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ 0-6 ವರ್ಷದೊಳಗಿನ ಮಕ್ಕಳನ್ನು ಸಾಮಾನ್ಯ ಮಕ್ಕಳೊಡನೆ ಬೆಳೆಯಲು/ಬೆರೆಯಲು ಬಿಡಬೇಕು, ಪೋಷಕರು ತಮ್ಮ ಮಕ್ಕಳಿಗೆ ಹೆಚ್ಚಿನ ಸಮಯವನ್ನು ನೀಡುವುದರಿಂದ ಮಕ್ಕಳಲ್ಲಿ ಬದಲಾವಣೆ ಕಂಡುಕೊಳ್ಳತ್ತೇವೆ ಎಂದು ಪಟ್ಟಣ ವಲಯ ಮೇಲ್ವಿಚಾರಕಿಯಾದ ಶ್ರೀಮತಿ ಕಾಂತಾ ಅವರು ತಿಳಿಸಿದರು.

## ಕ್ರಿಸಮಸ್: ಶಾಂತಿ ಹಾಗೂ ಪ್ರಿತಿಯನ್ನು ಸಾರುವ ಹಬ್ಬ”



ಡಿಸೆಂಬರ್ 29 ರಂದು ಸೇವಾ ಸಂಗಮ ಸಂಸ್ಥೆಯ ಸಹಕಾರದೊಂದಿಗೆ ನಡೆಯು ಕಲಬುರಗಿಯ 5 ಸ್ಲಂ ಗಳ ಕಲಿಕಾ ಕೇಂದ್ರಗಳಲ್ಲಿ, ಸಂಜೀವ ನಗರ, ಪಂಚಶೀಲಾ ನಗರ, ಇಂದಿರಾ ನಗರ, ನೇಹರು ನಗರ, ಮತ್ತು ಬೋರಾಬಾಯಿ ನಗರಗಳಲ್ಲಿ ಕ್ರಿಸಮಸ್ ಆಚರಿಸಲಾಯಿತು.ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್, ವಿಕ್ಟರ್ ವಾಸ್ ಹಾಗೂ ಸಹ ನಿರ್ದೇಶಕರಾದ ಫಾದರ್, ದಿಪಕ್ ಬೇಟಿ ನೀಡಿ ಮಕ್ಕಳೊಂದಿಗೆ ಕ್ರಿಸ್‌ಮಸ್ ಆಚರಣೆ ಮಾಡಿದರು. ಫಾದರ್ ವಿಕ್ಟರ್ ವಾಸ ರವರು ಮಾತನಾಡಿ “ಹೇಗೆ ಬೆಳಕಿನಿಂದ ಕತ್ತಲೆಯನ್ನು ಹೋಗಲಾಡಿಸಲು ಸಾಧ್ಯ, ಅದೇ ರೀತಿ ಶಿಕ್ಷಣದಿಂದ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಬೇಕು, ಪರಿಶ್ರಮದಿಂದ ಶಿಕ್ಷಣದ ಗುರಿಯನ್ನು ಸಾಧಿಸಬೇಕು, ಅದಕ್ಕಾಗಿ ಪ್ರತಿದಿನಾ ಸಾಯಂಕಾಲ ಕಲಿಕಾ ಕೇಂದ್ರಕ್ಕೆ ಬಂದು ಉತ್ತಮವಾಗಿ ಅಭ್ಯಾಸ ನಡೆಸಬೇಕು” ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ವಿವಿಧ ಕಾರ್ಯಕ್ರಮಗಳನ್ನು ನೀಡಿದರು. ಎಲ್ಲರಿಗೂ ಕೇಕ್ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ರೇಣುಕಾರವರು ಉಪಸ್ತಿತರಿದ್ದರು.ಕಲಿಕಾ ಕೇಂದ್ರದ ಶಿಕ್ಷಕರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.ಸೇವಾ ಸಂಗಮ ಸಂಸ್ಥೆಯ ಕಛೇರಿಯ ಸಹಾಯಕಿಯಾದ ಶ್ರೀಮತಿ ಸ್ವಾತಿ ರವರು ಭಾಗವಹಿಸಿದ್ದರು.





# ಸ್ಪರ್ಶ ಕಾರ್ಯಕ್ರಮ

## "ಕ್ಯಾನ್ಸರ ಅಪಾಯ ಸಂಭವನಿಯತೆಯನ್ನು ನಿರ್ವಹಿಸುವುದು"



ಡಿಸೆಂಬರ್ 13 ರಂದು ಕಲಬುರಗಿ ತಾಲ್ಲೂಕಿನ ಫರ್ತಬಾದ ಗ್ರಾಮದಲ್ಲಿ ಸ್ವ ಸಹಾಯ ಸಂಘದ ಮಹಿಳೆಯರಿಗೆ, ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಸ್ವಾತಿ ರವರು ಕ್ಯಾನ್ಸರ್ ಜಾಗೃತಿ ಮೂಡಿಸಿದರು, ಈ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಸ್ತನ ಕ್ಯಾನ್ಸರ್ ಹಾಗೂ ಬಾಯಿ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸಲಾಯಿತು, ಮತ್ತು ಮನೆಯಲ್ಲೆ ಕೈತೋಟ ಮಾಡಿ ಅದರಿಂದ ಬಂದ ತರಕಾರಿ ಸೇವನೆಯಿಂದ ಆಗುವ ಲಾಭಗಳ ಬಗ್ಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 12 ಜನ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.

### "ಆರೋಗ್ಯಯುತ ಪೃಥ್ವಿ...ಆರೋಗ್ಯಕರ ಜೀವನ.."

ಡಿಸೆಂಬರ್ 20 ರಂದು ಕಲಬುರಗಿ ತಾಲ್ಲೂಕಿನ ನಂದಿಕೂರ ಗ್ರಾಮದಲ್ಲಿ ವಿಕಲ ಚೇತನರಿಗೆ ಹಾಗೂ ಸ್ವ ಸಹಾಯ ಸಂಘದ ಮಹಿಳೆಯರಿಗೆ ಸೇವಾ ಸಂಗಮ ಸಂಸ್ಥೆಯ ಕ್ಯಾನ್ಸರ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಸ್ವಾತಿ ರವರು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿದರು. ಕಾರ್ಯಕ್ರಮದಲ್ಲಿ ಕ್ಯಾನ್ಸರ್‌ನ ಲಕ್ಷಣ, ಗುಣಗಳು, ಹಾಗೂ ತಂಬಾಕು, ಗುಟಕಾದಂತ ಕೆಟ್ಟ ಚಟಗಳಿಂದ ದೂರವಿರಿ ಎಂದು ತಿಳಿಸಿದರು, ಕ್ಯಾನ್ಸರ್ ಪ್ರಾರಂಭಿಕ ಹಂತದಲ್ಲಿ ತಪಾಷಣೆ ಮಾಡಿಸಿಕೊಳ್ಳುವುದರಿಂದ ಆಗುವ ಲಾಭಗಳ ಕುರಿತು ಮಾಹಿತಿ ನೀಡಿದರು, ಸಾವಯವ ಗೊಬ್ಬರದಿಂದ ಮನೆಯಲ್ಲೆ ಕೈತೋಟ ಮಾಡಿ ಅದರಿಂದ ಬಂದಂತ ತರಕಾರಿ ಸೇವನೆಯಿಂದ ಆಗುವ ಲಾಭಗಳ ಬಗ್ಗೆ ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ 20 ಜನ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು.





## ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಸೇವಾ ಸಂಘಮ ಸಂಸ್ಥೆ ಕಾರ್ಯ



# ಸಂಜೆ ಕಲಿಕಾ ಕೇಂದ್ರದಲ್ಲಿ ಮಕ್ಕಳ ದಿನ

■ ವಿಕ ಸುದ್ದಿಲೋಕ ಕಲಬುರಗಿ

ನಗರದ ಸೇಂಟ್ ಮೇರಿ ಶಾಲೆಯ ಮದರ್ ತೆರೆಸಾ ಸಭಾಂಗಣದಲ್ಲಿ ಸೇವಾ ಸಂಗಮ ಸಂಸ್ಥೆಯಿಂದ ಸಂಜೆಯ ಕಲಿಕಾ ಕೇಂದ್ರದಲ್ಲಿ ಮಕ್ಕಳ ದಿನ ಆಚರಿಸಲಾಯಿತು.

ವಲಯ ಆಯುಕ್ತ ರಮೇಶ ಪಟೇದಾರ್ ಮಾತನಾಡಿ, ಇಂದಿನ ಮಕ್ಕಳನ್ನು ನಾವು ಗೌರವಿಸಿ ಅವರ ಜೀವನಕ್ಕೆ ಬೇಕಾಗುವ ಮೂಲ ಅವಶ್ಯಕತೆಗಳನ್ನು ಒದಗಿಸುವುದು ಅವಶ್ಯವಿದೆ. ಉತ್ತಮ ಆರೋಗ್ಯ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಉತ್ತಮ ಶಿಕ್ಷಣ ನಿಡಬೇಕು, ಅವರಿಗೆ ಸಂರಕ್ಷಣೆ ಒದಗಿಸುವ ಮೂಲಕ ಸಮಾಜದಲ್ಲಿ ಅವರಿಗಾಗಿ ಗೌರವ ಹಾಗೂ ಘನತೆ ಪರಿಸರ ನಿರ್ಮಾಣ ಮಾಡಬೇಕೆಂದು ತಿಳಿಸಿದರು.

ಜೀಮ್ ಪ್ರೇಮ್‌ಜಿ ಫೌಂಡೇಶನ್ ಜಿಲ್ಲಾ ಸಂಯೋಜಕರಾದ ಮಹಾದೇವಪ್ಪ ಮಾತನಾಡಿದರು. ಫಾದರ ವಿಕ್ಟರ್ ವಾಸ್ ನಿರ್ದೇಶಕರು ಸೇವಾ ಸಂಗಮ ಸಂಸ್ಥೆ ಕಲಬುರಗಿ ಇವರು ಮಾತನಾಡುತ್ತಾ, ಕಳೆದ ಒಂದು ವರ್ಷದಿಂದ ಕಲಬುರಗಿ ನಗರ ಸ್ಲಂ ಗಳಲ್ಲಿ ಮಕ್ಕಳ ಉತ್ತಮ ಶಿಕ್ಷಣಗೋಸ್ಕರ ಸಾಯಂಕಾಲದ ಕಲಿಕಾ ಕೇಂದ್ರಗಳನ್ನು ತೆರೆದು ಗುಣಮಟ್ಟದ ಶಿಕ್ಷಣ ಪಡೆಯಲು ಸಹಾಯ ಮಾಡುತ್ತಿದೆ. ಎಂದು ತಿಳಿಸಿದರು.

ಫಾದರ ಸ್ಟ್ಯಾನಿ ಲೋಬೊ ಅಧ್ಯಕ್ಷತೆ ವಹಿಸಿದ್ದರು. ಫಾದರ ಪ್ರವೀಣ ಜೋಸೆಫ್, ಸಾವಿತ್ರಿ ಬಾ ಫುಲೆ ಮಹಿಳಾ ಸಂಘಟನೆ ಸಂಚಾಲಕಿ ರೇಣುಕಾ ಎಸ್, ಸರಡಗಿ ಮತ್ತು ಸೇವಾ ಸಂಗಮ ಸಂಸ್ಥೆ ಕಚೇರಿ ಸಹಾಯಕಿ ಸ್ವಾತಿ ಮತ್ತು ಕಲಿಕಾ ಕೇಂದ್ರದ ಶಿಕ್ಷಕಿ ಮಾಲಾಶ್ರೀ, ಹೀನಾ, ಸುನಿತಾ, ರಂಜಿತ ಇತರರಿದ್ದರು. ಕಲಿಕಾ ಕೇಂದ್ರದ 110 ಮಕ್ಕಳಿಗೆ ನೋಟ್‌ಬುಕ್ ವಿತರಿಸಿದರು.

ಸೇವಾ ಸಂಗಮ ಸಂಸ್ಥೆಯಿಂದ ಸಂಜೆಯ ಕಲಿಕಾ ಕೇಂದ್ರದ ಮಕ್ಕಳಿಗೆ ನೋಟ್‌ಬುಕ್ ವಿತರಿಸಲಾಯಿತು.



# ಬೆಳವಣಿಗೆ ಕುಂಠಿತವಿರುವ ಮಕ್ಕಳೂ ಸಮಾಜದ ಮುಖ್ಯವಾಹಿನಿಗೆ ಬರಲಿ

ಬಿಗರಹಳ್ಳಿಯಲ್ಲಿ ಸ್ವಚ್ಛತಾ ಅಭಿಯಾನ

•Bill Books •Letter Heads •Doctor Files •Pomphlets •Stickers etc.

9902 55 15 65



# ಎಲ್ಲರಲ್ಲೂ ಸಾಧಿಸುವ ಛಲ ಹೊಂದಿರಲಿ

■ ವಿಕ ಸುದ್ದಿಲೋಕ ಕಲಬುರಗಿ

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ **1993** ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ **2005**ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.





**ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.**

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/– ವರ್ಷಕ್ಕೆ 40,000/–

**ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.**

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/–

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು *PAN number* ಕೆಳಗಿರುವ ಸಂಖ್ಯೆಗೆ *WhatsApp* ಮಾಡುವುದು.

**(Only for Indian Citizens)**

**Bank Account Details**

DONATE NOW

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

**Fr. Victor Anil Vas**
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in